**<u>ದಿ : 04-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ</u>:- ಇರುವುದಿಲ್ಲ.**

<u>ಪಾಟೀ **ಸವಾಲು :**</u> 1ನೇ ಎದುರುದಾರ ಮತ್ತು ಆತನ ಪರ ವಕೀಲರು ಗೈರು ಹಾಜರು. ಆದ್ದರಿಂದ 1ನೇ ಎದುರುದಾರರ ಪರ ಸಾಕ್ಷಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ **ಸವಾಲು :**</u> 2ನೇ ಎದುರುದಾರ ವಿಮಾ ಕಂಪನಿಯ ಪರ ವಕೀಲರಾದ ಶ್ರೀ ಎನ್.ಪಿ.ಎನ್ ರವರಿಂದ

ಮೃತ Francis A. Gones ರವರು ನನ್ನ ತಾಯಿಯ ತಂಗಿಯ ಗಂಡ ಅಂದರೆ ಚಿಕ್ಕಪ್ಪ. ನಾನು ನನ್ನ ಸ್ಕೂಟಿಯಲ್ಲಿ ಶಿರಾಲಿಯಿಂದ ಮುರ್ಡೇಶ್ವರಕ್ಕೆ ಹೋಗುವಾಗ ಸುಮಾರು 50 ಮೀಟರ್ನಷ್ಟು ದೂರದಲ್ಲಿ ನನ್ನ ಮುಂದೆ ಆದ ಅಪಘಾತವನ್ನು ನಾನು ನೋಡಿರುತ್ತೇನೆ. ಅಪಘಾತಪಡಿಸಿದ ಕಾರು ಭಟ್ಕಳ ಕಡೆಯಿಂದ ಹೊನ್ನಾವರ ಕಡೆಗೆ ಹೋಗುತ್ತಿತ್ತು. ಅಪಘಾತದ ಸ್ಥಳದಲ್ಲಿ ಕಾರು ಭಟ್ಕಳ ಕಡೆಯಿಂದ ಹೊನ್ನಾವರ ಕಡೆಗೆ ಹೋಗುತ್ತಿದ್ದಾಗ ಮೃತನು ಪೂರ್ವ ದಿಕ್ಕಿನ ಹೆದ್ದಾರಿಯಿಂದ ಪಶ್ಚಿಮ ದಿಕ್ಕಿನ ರಸ್ತೆಯನ್ನು ದಾಟುವ ಸಲುವಾಗಿ ರಸ್ತೆಯಲ್ಲಿ ಹೋಗುತ್ತಿದ್ದ ಕಾರನ್ನು ನೋಡದೇ ಏಕಾಏಕಿ ರಸ್ತೆಯ ಮೇಲೆ ಬಂದಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೃತನಿಗೆ ಡಿಕ್ಕಿ ಮಾಡಿದ ನಂತರ ಕಾರು ಮುಂದಕ್ಕೆ ಸಾಗಿ ಅದು ಸಾಗುತ್ತಿದ್ದ ಮಾರ್ಗದ ಎಡಭಾಗದಲ್ಲಿದ್ದ ಕಂಬಕ್ಕೆ ಡಿಕ್ಕಿ ಮಾಡಿ ನಿಂತಿರುತ್ತದೆ. ಅಪಘಾತವು ಟಾರು ರಸ್ತೆಯ ಮೇಲೆ ಆಗಿದೆ ಎಂದರೆ ಸರಿಯಲ್ಲ. ಅಪಘಾತವು ಟಾರು ರಸ್ತೆಯ ಮೇಲೆ ಆಗಿದ್ದರೂ ಸಹ ಮಣ್ಣಿನ ರಸ್ತೆಯ ಮೇಲೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವಾಗುವಾಗ ಸ್ಥಳದಲ್ಲಿ ಇರಲಿಲ್ಲ ಮತ್ತು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಮೃತ ಮತ್ತು ಅರ್ಜಿದಾರರು ನನ್ನ ಸಂಬಂಧಿಕರಾಗಿರುವುದರಿಂದ, ಅರ್ಜಿದಾರರಿಗೆ ಪರಿಹಾರ ದೊರಯಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**